**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ ೧೮೮೮/೨೦೨೩ ಸಿ.ಡಬ್ಲ್ಯೂ–೭ ಪಿ.ಡಬ್ಲ್ಯೂ-೦೫

| | | |
|---|---|---|
| ಹೆಸರು | ಃ | ಸಾಗರ |
| ತಂದೆಃಗಂಡ | ಃ | ಮಳೆಪ್ಪ |
| ವಯಸ್ಸು | ಃ | ೩೮ ವರ್ಷ |
| ಉದ್ಯೋಗ | : | ಮುಖ್ಯ ಪೇದೆ ನಿಂಬರ್ಗಾ ಪೋಲಿಸ್ ಠಾಣೇ |
| ವಾಸಸ್ಥಳ | ಃ | ನಿಂಬರ್ಗಾ |

ದಿನಾಂಕಃ ೦೧.೦೪.೨೦೨೫
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ೨೦೨೧ ರಿಂದ ನಿಂಬರ್ಗಾ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿ. ೨೧.೦೨.೨೦೨೩ ರಂದು ನಾನು ಠಾಣಾ ಅಮಲ್ದಾರ ಕರ್ತವ್ಯದಲ್ಲಿದ್ದಾಗ ಚಾಸಾ-೧ ರವರು ಠಾಣೇಗೆ ಬಂದು ಲಿಖಿತ ಫಿರ್ಯಾದಿಯನ್ನು ಸಲ್ಲಿಸಿದ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ ೧೧/೨೦೨೩ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-೧ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೧(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ.ದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೦೩ ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-೦೩(ಎ) ಎಂದು ಗುರುತಿಸಲಾಯಿತು.

ಮರುದಿನ ದಿನ ತನಿಖೆಯನ್ನು ಕೈಗೆತ್ತಿಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-೨ ಮತ್ತು ೩ ರವರ ಸಮಕ್ಷಮ ಚಾಸಾ-೪ ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಭಾವಚಿತ್ರಗಳನ್ನು ತೆಗೆದು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿಯು ನಿಪಿ-೨ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೨(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-೪ ರಿಂದ ೬ ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿ.೧೪.೦೪.೨೦೨೩ ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿರುತ್ತಾರೆ, ಪರಿಶೀಲಿಸಿ

ಅವರನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ತನಿಖೆ ಪೂರ್ಣಗೊಂಡ ಕಾರಣ ಕಡತಗಳೆಲ್ಲವನ್ನು ಪರಿಶೀಲಿಸಿ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳಿದ್ದ ಕಾರಣ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ.ವಿ.ಇ. ವಕೀಲರಿಂದಃ**

ನಿಂಬರಗಾ ಠಾಣೆಯಿಂದ ಹಿತ್ತಲಶಿರೂರ ಗ್ರಾಮದ 07 ಕಿ.ಮೀ. ಅಂತರವಿದೆ. ಅರ್ಧ ಗಂಟೆಯಲ್ಲಿ ಹಿತ್ತಲಶಿರೂರದಿಂದ ನಮ್ಮ ಠಾಣೆಗೆ ಬರಬಹುದು ಎಂದರೆ ಸರಿ ಫಿರ್ಯಾದಿಕೊಡಲು ಸಂಬಂಧಿಕರನ್ನು ಹಿರಿಯರನ್ನು ವಿಚಾರಿಸಿ ಕೊಡಲು ತಡವಾಗಿರುತ್ತದೆ ಎಂದು ನಮೂದಿಸಿರುತ್ತದೆ, ಆ ಸಂಬಂಧವಾಗಿ ಸಂಬಂಧಿಕರ ಮತ್ತು ಹಿರಿಯರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ಥಾರೆ. ಆರೋಪಿತರ ಮತ್ತು ಚಾಸಾ-೧ ರವರ ನಡುವೆ ಭೂಮಿಯ ವಿಚಾರವಾಗಿ ತಕರಾರು ಇದೆ, ಈ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ಒಟ್ಟು ಕುಟುಂಬದ ಆದಾಯದಿಂದ ಆರೋಪಿಯ ತಂದೆ ಅವರನು 10 ವರ್ಷದವನಿದ್ದಾಗಲೇ ಖರೀದಿ ಮಾಡಿದ್ದು ಇರುತ್ತದೆ ಈ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-೪ ಮತ್ತು ೫ ರವರು ಚಾಸಾ-೬ ರವರ ಸ್ನೇಹಿತರು ಅವರು ಹಿತ್ತಲಶಿರೂರ ಗ್ರಾಮದವರಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಜಮೀನು ಸ.ನಂ. ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿ ಮತ್ತು ಚಾಸಾ-೧ ರವರ ನಡುವೆ ಪಾಲುವಾಟ್ನಿ ದಾವೆ ನಡೆದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಯಾವುದೇ ಘಟನೆ ನಡೆಯದಿದ್ದರೂ ಎಲ್ಲಾ ದಾಕಲಾತಿಗಳನ್ನು ಠಾಣೆಯಲ್ಲಿಯೇ ಸೃಷ್ಟಿಸಿ ಖೊಟ್ಟಿಯಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂಥರೆ ಸರಿ ಅಲ್ಲ. ಚಾಸಾ-೪ ರಿಂದ ೬ ರವರ ಹೇಳಿಕೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ತೆಗೆದುಕೊಂಡಿದ್ದೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ.

ದಿ. ೨೧.೦೨.೨೦೨೩ ರಂದು ನಾನು ಠಾಣಾ ಅಮಲ್ದಾರ ಕರ್ತವ್ಯದಲ್ಲಿದ್ದಾಗ ಚಾಸಾ-೧ ರವರು ಠಾಣೇಗೆ ಬಂದು ಲಿಖಿತ ಫಿರ್ಯಾದಿಯನ್ನು ಸಲ್ಲಿಸಿದ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ ೧೧/೨೦೨೩ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುದಿನ ದಿನ ತನಿಖೆಯನ್ನು ಕೈಗೆತ್ತಿಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-೨ ಮತ್ತು ೩ ರವರ ಸಮಕ್ಷಮ ಚಾಸಾ-೪ ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಭಾವಚಿತ್ರಗಳನ್ನು ತೆಗೆದು ಕಡತದಲ್ಲಿಅಳವಡಿಸಿಕೊಂಡೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಅದೇ ದಿನ ಚಾಸಾ-೪ ರಿಂದ ೬ ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು, ದಿ.೧೪.೦೪.೨೦೨೩ ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿರುತ್ತಾರೆ, ಪರಿಶೀಲಿಸಿ ಅವರನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.